ಸಮಾಚಾರ ಸಣ್ಣದಲ್ಲ

ಚಿನ್ನಸ್ವಾಮಿ ಸುತ್ತಮುತ್ತ ಓಡಾಟ: 8 ಜನ ಸೆರೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಅನುಮಾನಸ್ಪದವಾಗಿ ಓಡಾಡುತ್ತಿದ್ದ ಜಾರ್ಖಂಡ್ ಮೂಲದ ನಾಲ್ವರು ಸೇರಿ ಒಟ್ಟು 8 ಜನರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇತ್ತೀಚೆಗೆ ಮೊಬೈಲ್ ಕಳ್ಳತನ ಹಿನ್ನೆಲೆ ಉತ್ತರ ಭಾರತದಿಂದ ಬಂದಿದ್ದ ಕೆಲವರನ್ನು ಪೊಲೀಸರು ಬಂಧಿಸಿದ್ದರು. ಇದೀಗ ಅನುಮಾನಸ್ಪದ ವಾಗಿ ಓಡಾಡುತ್ತಿದ್ದವರನ್ನು ವಶಕ್ಕೆ ಪಡೆದಿರುವ ಪೊಲೀಸರು ದಾಖಲೆ ಪತ್ರ ಮತ್ತು ಟಿಕೆಟ್ ಎಲ್ಲವನ್ನೂ ಪರಿಶೀಲಿಸುತ್ತಿದ್ದಾರೆ. ಪಿಕ್ ಪಾಕೆಟ್ ಮಾಡಿ ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್, ಖಡಕ್ ವಾರ್ನಿಂಗ್ ಕೊಟ್ಟಿದ್ದಾರೆ. ಮಾರ್ಚ್ 28ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸನ್ ರೈಸರ್ಸ್ ಹೈದರಾಬಾದ್ ಮತ್ತು ಆರ್‌ಸಿಬಿ ಮಧ್ಯೆ ಐಪಿಎಲ್ ಉದ್ಘಾಟನಾ ಪಂದ್ಯ ನಡೆದಿತ್ತು. ಪಂದ್ಯ ನೋಡ್ತಾ ಫ್ಯಾನ್ಸ್ ಕುಣಿದು ಕುಪ್ಪಳಿ ಸುತ್ತಿದ್ದರೆ, ಅಪ್ರಾಪ್ತ ಹುಡುಗರ ಗ್ಯಾಂಗ್ ಮೊಬೈಲ್‌ಗಳನ್ನು ಸದ್ದಿಲ್ಲದೆ ಕದಿಯುತ್ತಿದ್ದರು. ಒಂದಲ್ಲ, ಎರಡಲ್ಲ, ಬರೋಬ್ಬರಿ 72 ಮೊಬೈಲ್‌ಗಳನ್ನು ದೋಚಿ ದ್ದರು. ಮೈದಾನದ ಸುತ್ತಮುತ್ತ ಭದ್ರತೆಗೆ 2,300 ಪೊಲೀಸರ ನಿಯೋಜನೆ ಮಾಡಲಾಗಿತ್ತು. ಜನಸಂದಣಿ ನಿಯಂತ್ರ ಣಕ್ಕೆ ಬಿಎಂಟಿಸಿ ಯಿಂದ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ. ಪಾರ್ಕಿಂಗ್, ಮೆಟ್ರೋ ಸೇವೆ ಈ ಹಿಂದಿನ ಪಂದ್ಯ ದಂತೆಯೇ ಇತ್ತು. ತಡರಾತ್ರಿ 2 ಗಂಟೆಯವರೆಗೂ ನಮ್ಮ ಮೆಟ್ರೋ ರೈಲು ಸಂಚಾರ ವಿತ್ತು. ಸುರಕ್ಷತೆಗಾಗಿ ಸ್ಟೇಡಿಯಂ ಸಮೀಪದ ರಸ್ತೆಗೆ ಬ್ಯಾರಿಕೇಡ್ ಅಳವಡಿಕೆ ಮಾಡಲಾಗಿದ್ದು, ಟಿಕೆಟ್ ಇಲ್ಲದ ವರು ಸ್ಟೇಡಿಯಂ ಸುತ್ತ ಬಾರದಂತೆ ಸೂಚನೆ ನೀಡಲಾಗಿದೆ.

10 ರೈಲುಗಳೊಂದಿಗೆ ಮೆಟ್ರೋ ಕಾರ್ಯಾಚರಣೆ | 5 ನಿಮಿಷಕ್ಕೊಂದು ರೈಲು ಸಂಚಾರ

ಹಳದಿ ಮಾರ್ಗಕ್ಕೆ ಶೀಘ್ರ 2 ರೈಲು ಆಗಮನ

ಬೆಂಗಳೂರು: ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಮತ್ತೆರಡು ಹೊಸ ರೈಲುಗಳ ಆಗಮನವಾಗಲಿದ್ದು, ಶೀಘ್ರವೇ 10 ರೈಲುಗಳೊಂದಿಗೆ ಹಳದಿ ಮಾರ್ಗದಲ್ಲಿ ಮೆಟ್ರೋ ಕಾರ್ಯಾಚರಣೆ ಆರಂಭವಾಗಲಿದೆ.

ಆರ್‌ವಿ ರಸ್ತೆ ಮತ್ತು ಬೊಮ್ಮಸಂದ್ರದವರೆಗಿನ ಹಳದಿ ಮಾರ್ಗದಲ್ಲಿ ನಿತ್ಯ ಅಂದಾಜು ಒಂದು ಲಕ್ಷ ಮಂದಿ ಪ್ರಯಾಣ ಮಾಡುತ್ತಿದ್ದು, ಎಂಟು ರೈಲುಗಳು ಕಾರ್ಯ ನಿರ್ವಹಿಸುತ್ತಿವೆ. ಈ ರೈಲುಗಳು ಪೀಕ್ ಸಮಯದಲ್ಲಿ 9 ನಿಮಿಷಕ್ಕೆ ಒಂದರಂತೆ, ಸಂಚಾರ ದಟ್ಟಣೆ ಕಡಿಮೆ ಇರುವಾಗ ಸುಮಾರು 15 ನಿಮಿಷಗಳಿಗೆ ಒಂದರಂತೆ ಕಾರ್ಯ ನಿರ್ವಹಿಸುತ್ತಿವೆ. ಮುಂದಿನ ಮೇ ತಿಂಗಳಿನಿಂದ ಪ್ರತಿ 5-6 ನಿಮಿಷಕ್ಕೆ ಒಂದರಂತೆ ರೈಲು ಸಂಚಾರ ನಡೆಸಲಿವೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ.

ಏಪ್ರಿಲ್ 2ರಂದು ಹಳದಿ ಮಾರ್ಗಕ್ಕಾಗಿ ಚಾಲಕರಹಿತ 9ನೇ ರೈಲು ಸೆಟ್ ಪಶ್ಚಿಮ ಬಂಗಾಳದ ಟಿಟಾಗರ್ ಕಂಪನಿಯಿಂದ ಹೊರಟಿದ್ದು, ಇದು ಏಪ್ರಿಲ್ ಮಧ್ಯಭಾಗಕ್ಕೆ ಬೆಂಗಳೂರು ಮೆಟ್ರೋ ಡಿಪೋಗೆ ಬರಲಿದೆ. ಆ ರೈಲನ್ನು ಹಳಿ ಮೇಲೆ ಇಳಿಸಿ ಜೋಡಿಸುತ್ತಿದ್ದಂತೆ ಪ್ರಾಯೋಗಿಕ ಸಂಚಾರ ಮತ್ತು ಸಿಗ್ನಲಿಂಗ್ ಸೇರಿದಂತೆ ವಿವಿಧ ಪರೀಕ್ಷೆಗಳು ನಡೆಯಲಿವೆ. ಬಳಿಕ ಕೆಲವೇ ದಿನಗಳಲ್ಲಿ ಅಧಿಕೃವಾಗಿ ಕಾರ್ಯಚರಣೆಗೆ ನಿಯೋಜನೆಗೊಳ್ಳಲಿದೆ.

ಶೀಘ್ರ 10ನೇ ಚಾಲಕರಹಿತ ರೈಲು ರವಾನೆ: ಇನ್ನೂ ಆರು ಬೋಗಿಗಳ 10ನೇ ಚಾಲಕರಹಿತ ರೈಲು ಸೆಟ್ ಸಹ ಟಿಟಾಗರ್‌ನಿಂದ ಇದೇ ಏಪ್ರಿಲ್‌ನಲ್ಲೇ ಪೂರೈಕೆ ಆಗುವ ಸಾಧ್ಯತೆಯಿದ್ದು, ಈ ರೈಲು ಹೊತ್ತ ಲಾರಿಗಳು ಇನ್ನೂ ಟಿಟಾಗರ್‌ನಿಂದ ಹೊರಟಿಲ್ಲ. ಶೀಘ್ರವೇ ರವಾನೆ ಆಗಲಿವೆ. ಈ ಎರಡು ರೈಲಗಳ ಪ್ರಯಾಣಿಕ ಕಾರ್ಯಾಚರಣೆಗೆ ಆರಂಭವಾದರೆ ಒಟ್ಟು 10 ರೈಲುಗಳು ಎಲೆಕ್ಟ್ರಾನಿಕ್ ಸಿಟಿ

ಮೆಟ್ರೋ ಕಾರಿಡಾರ್‌ನಲ್ಲಿ ಸೇವೆ ನೀಡಿದಂತಾಗುತ್ತದೆ. ಆಗ ರೈಲುಗಳ ಆವರ್ತನ ಸಮಯ ಅಂದರೆ ಪ್ರಯಾಣಿಕರಿಗೆ ನಿಲ್ದಾಣದಲ್ಲಿ 5-6 ನಿಮಿಷಕ್ಕೆ ಒಂದರಂತೆ ರೈಲುಗಳು ಲಭ್ಯವಾಗುತ್ತವೆ.

ಎಲೆಕ್ಟ್ರಾನಿಕ್ ಸಿಟಿ ಸೇರಿ ಬೊಮ್ಮಸಂದ್ರವರೆಗೆ ಹಳದಿ ಮಾರ್ಗ ಆರಂಭವಾದ ದಿನವೇ 30 ಸಾವಿರ ಮಂದಿ ಪ್ರಯಾಣ ಮಾಡಿದ್ದರು. ಅಲ್ಲಿಂದ ಈವರೆಗೆ ನಿತ್ಯ 90 ರಿಂದ ಒಂದು ಲಕ್ಷ ಪ್ರಯಾಣಿಕರು ನಿತ್ಯ ಸಂಚಾರ ಮಾಡುತ್ತಾರೆ. ಹಳದಿ ಮಾರ್ಗವು ಸಿಲ್ಕ್‌ಬೋರ್ಡ್ ಮಾರ್ಗವಾಗಿ ಸಾಗುತ್ತದೆ. ಹೀಗಾಗಿ ಮೆಟ್ರೋ ಮೇಲಿನ ಪ್ರಯಾಣಿಕರ ಅವಲಂಬನೆ ಹೆಚ್ಚುತ್ತಿದೆ. ಇದೇ ವರ್ಷಾಂತ್ಯಕ್ಕೆ ಸಿಲ್ಕ್ ಬೋರ್ಡ್-ಕೆ.ಆರ್.ಪುರವರೆಗಿನ ನೀಲಿ ಮಾರ್ಗವು ತೆರೆಯುವ ನಿರೀಕ್ಷೆ ಇದೆ. ಅದು ಸಾಧ್ಯವಾದಲ್ಲಿ ಹೊರ ವರ್ತುಲರಸ್ತೆ ಮೂಲಕ ಸಾಗುವವರ ಪೈಕಿ ಬಹುತೇಕರು ಮೆಟ್ರೋ ಹಳದಿ ಮತ್ತು ನೀಲಿ ಮಾರ್ಗದಲ್ಲಿ ಸಂಚಾರ ನಡೆಸುತ್ತಾರೆ. ಭವಿಷ್ಯದ ದೃಷ್ಟಿಯಿಂದ ತ್ವರಿತವಾಗಿ ಇನ್ನಷ್ಟು ರೈಲುಗಳ ಪೂರೈಕೆ ಆಗುವುದು ಅಗತ್ಯವಾಗಿದೆ.

ಹಳದಿ, ನೀಲಿ ಮೆಟ್ರೋ ಲೈನ್‌ನಲ್ಲಿ ಟ್ರಾವೆಲೇಟರ್, ಕನೆಕ್ಟಿಂಗ್ ವಾಕ್‌ವೇ ನಿರ್ಮಾಣ: ನಮ್ಮ ಮೆಟ್ರೋದ ಸಿಲ್ಕ್ ಬೋರ್ಡ್‌ನಲ್ಲಿ ವರ್ಷಾಂತ್ಯಕ್ಕೆ ನೀಲಿ ಮಾರ್ಗವು ವಾಣಿಜ್ಯ ಸಂಚಾರಕ್ಕೆ ತೆರವುಗೊಳ್ಳುವ ಸಾಧ್ಯತೆಯಿದ್ದು, ಸಂಚಾರ ದಟ್ಟಣೆ ಮತ್ತಷ್ಟು ಕಡಿತಗೊಳ್ಳುವ ನಿರೀಕ್ಷೆಯಿದೆ. ಇದೇ ಜಂಕ್ಷನ್ ಮಾರ್ಗವಾಗಿ ಹಳದಿ ಮಾರ್ಗದ ರೈಲುಗಳ ಸಂಚರಿಸುತ್ತಿದ್ದು, ಪ್ರಯಾಣಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಎರಡು ಮಾರ್ಗಗಳ ನಿಲ್ದಾಣಗಳ ನಡುವೆ ಮಹತ್ವದ ಯೋಜನೆಗೆ ಮೆಟ್ರೋ ಚಿಂತನೆ ನಡೆಸಿ ಟೆಂಡರ್ ಆಹ್ವಾನಿಸಿದೆ. ಹಳದಿ ಮಾರ್ಗ ಮತ್ತು ನೀಲಿ ಮಾರ್ಗದ ಎರಡು ಸಿಲ್ಕ್ ಬೋರ್ಡ್ ನಿಲ್ದಾಣಗಳ ನಡುವಿನ ಟ್ರಾವೆಲೇಟರ್ ಮತ್ತು ಕನೆಕ್ಟಿಂಗ್ ವಾಕ್‌ವೇ ಸಂಬಂಧಿತ ಕಾಮಗಾರಿಗಳಿಗಾಗಿ ಟೆಂಡರ್ ಕರೆದಿದ್ದು, ಸಿವಿಲ್, ಸ್ಟ್ರಕ್ಚರಲ್ ಕೆಲಸಗಳು ಇತರ ವಿನ್ಯಾಸಗಳು ಸೇರಿವೆ.

ಈ ಪ್ರಯಾಣಿಕ ಸ್ನೇಹಿ ಮೆಟ್ರೋ ಮೂಲಸೌಕರ್ಯ ಯೋಜನೆಯು ಅಂದಾಜು 58.99 ಕೋಟಿ ರು ವೆಚ್ಚದ್ದಾಗಿದ್ದು, ಈ ಟೆಂಡರ್ ಮುಂದಿನ ತಿಂಗಳ ಮೇ 5ರಂದು ಉದ್ಘಾಟನೆಯಾಗಲಿದೆ. ಈ ಉದ್ದೇಶಿತ ಕಾಮಗಾರಿಗಳನ್ನು ಟೆಂಡರ್ ಪಡೆದ ಕಂಪನಿಗಳು 9 ತಿಂಗಳುಗಳಲ್ಲಿ ಪೂರ್ಣಗೊಳಿಸಬೇಕು ಎಂಬ ಷರತ್ತನ್ನು ಮೆಟ್ರೋ ಅಧಿಕಾರಿಗಳು ಹೇರಿದ್ದಾರೆ. ಬಿಎಂಆರ್‌ಸಿಎಲ್ ವತಿಯಿಂದ ಸಿಲ್ಕ್‌ಬೋರ್ಡ್-ಕೆ.ಆರ್.ಪುರ ಏರ್‌ಪೋರ್ಟ್ ವರೆಗೆ ನೀಲಿ ಮಾರ್ಗ ನಿರ್ಮಾಣವಾಗುತ್ತದೆ. ಇದರ 2ಎ ಹಂತ ಮುಂದಿನ ವರ್ಷ ತೆರೆಯಲು ಪ್ಲ್ಯಾನ್ ಮಾಡಿಕೊಳ್ಳಲಾಗಿದೆ. ಸಿಲ್ಕ್‌ಬೋರ್ಡ್ ಮಾರ್ಗವಾಗಿ ರಾಷ್ಟ್ರೀಯ ವಿದ್ಯಾಲಯ-ಬೊಮ್ಮಸಂದ್ರವರೆಗೆ ಹಳದಿ ಮಾರ್ಗ ಹಾದು ಹೋಗುತ್ತದೆ.

ಪ್ರಯಾಣಿಕರ ಸಂಖ್ಯೆ ಹೆಚ್ಚಳ ನಿರೀಕ್ಷೆ

ಹಳದಿ ಮಾರ್ಗದ ಲೋಕಾರ್ಪಣೆಯಾಗಿದ್ದು, ನಿತ್ಯ ಒಂದು ಲಕ್ಷಕ್ಕೂ ಅಧಿಕ ಪ್ರಯಾಣಿಕರು ಸಂಚಾರ ನಡೆಸುತ್ತಿದ್ದಾರೆ. ನೀಲಿ ಮಾರ್ಗ ವಾಣಿಜ್ಯ ಸಂಚಾರಕ್ಕೆ ತೆರೆದುಕೊಂಡರೆ ಪ್ರಯಾಣಿಕರ ಸಂಖ್ಯೆ ದುಪ್ಪಟ್ಟಾಗಲಿದೆ. ಇವರಿಗೆ ಸುಗಮ ಸಂಚಾರಕ್ಕೆ ಹಾಗೂ ನೀಲಿಯಿಂದ ಹಳದಿ ಮಾರ್ಗಕ್ಕೆ ರೈಲು ಬದಲಾಯಿಸುವ ಪ್ರಯಾಣಿಕರಿಗಾಗಿ ಈ ಮೂಲ ಸೌಕರ್ಯ ಅಭಿವೃದ್ಧಿಪಡಿಸಲು ಮೆಟ್ರೋ ಅಧಿಕಾರಿಗಳು ಟೆಂಡರ್ ಕರೆದಿದ್ದಾರೆ. ಸಿಲ್ಕ್ ಬೋರ್ಡ್ ಜಂಕ್ಷನ್ ಸದಾ ವಾಹನಗಳ ದಟ್ಟಣೆಯಿಂದ ಕೂಡಿದ್ದು, ಹಳದಿ ಮಾರ್ಗದ ಮೆಟ್ರೋ ಇಳಿದು ನೀಲಿ ಮಾರ್ಗ ಏರಲು ರಸ್ತೆ ಅನುಸರಿಸಿದರೆ ಸಮಯ ಹೆಚ್ಚು ಹಿಡಿಯಬಹುದು. ಈ ಸಮಸ್ಯೆ ಪರಿಹಾರಕ್ಕಾಗಿ ನೀಲಿ-ಹಳದಿ 2 ಸಿಲ್ಕ್‌ಬೋರ್ಡ್ ನಿಲ್ದಾಣಗಳ ನಡುವೆ ಟ್ರಾವೆಲೇಟರ್ ಮತ್ತು ಕನೆಕ್ಟಿಂಗ್ ವಾಕ್ವೇ ನಿರ್ಮಿಸಿದರೆ ಜನರಿಗೆ ತ್ವರಿತ ಸೇವೆ, ರೈಲು ಪ್ರಯಾಣ ಸಾಧ್ಯವಾಗುತ್ತದೆ. ನಿಲ್ದಾಣದಿಂದ ರಸ್ತೆಗೆ ಬಂದು, ಜಂಕ್ಷನ್ ದಾಟಿ ಪಕ್ಕದ ಮತ್ತೊಂದು ನಿಲ್ದಾಣಕ್ಕೆ ಹೋಗುವ ಪ್ರಮೇಯ ತಪ್ಪುತ್ತದೆ. ಇದರಿಂದ ಸಮಯ ಉಳಿತಾಯವೂ ಆಗಲಿದೆ. ಸಿಲ್ಕ್‌ಬೋರ್ಡ್‌ನಿಂಡ ಕೆ.ಆರ್.ಪುರದವರೆಗೆ (2ಎ) ಮತ್ತು ಕೆ.ಆರ್ ಪುರದಿಂದ ದೇವನಹಳ್ಳಿ ಏರ್‌ಪೋರ್ಟ್‌ವರೆಗೆ (2ಬಿ) ಎರಡು ಹಂತಗಳಲ್ಲಿ ನೀಲಿ ಮಾರ್ಗದ ನಿರ್ಮಾಣ ಕೆಲಸಗಳು ಬರದಿಂದ ಸಾಗಿವೆ. ಇದರಲ್ಲಿ 2ಎ ಮಾರ್ಗವು 2026ರ ಮಾರ್ಚ್‌ನಲ್ಲಿ ತೆರೆಯಲು ಮೊದಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಡಿಸೆಂಬರ್ 2026ರಂದು ತೆರೆಯಲು ನಿರ್ಧರಿಸಲಾಗಿದೆ.

ಐಪಿಎಲ್ ಟಿಕೆಟ್ ಹೆಸರಲ್ಲಿ ವಂಚನೆ

ಬೆಂಗಳೂರು: ಚಿನ್ನಸ್ವಾಮಿಯಲ್ಲಿ ನಡೆಯ ಲಿರುವ ಆರ್‌ಸಿಬಿ ಮತ್ತು ಸಿಎಸ್ ಕೆ ಐಪಿಎಲ್ ಪಂದ್ಯದ ಟಿಕೆಟ್ ಪಡೆಯಲು ಹೋಗಿ ವಂಚನೆಗೊಳಗಾಗಿ ಟೆಕ್ಕಿಯೊಬ್ಬರು 1.46 ಲಕ್ಷ ರು. ಕಳೆದುಕೊಂಡಿದ್ದಾರೆ. ಈ ಸಂಬಂಧ ಮಹದೇವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಟೆಕ್ಕಿ ಐಪಿಎಲ್ ಟಿಕೆಟ್‌ಗೆ ಸಂಬಂಧಿಸಿದಂತೆ ಇನ್ಸ್ಟಾಗ್ರಾಮ್‌ನಲ್ಲಿ ಹಾಕಿದ್ದ ಒಂದು ಪೋಸ್ಟ್ ನೋಡಿದ್ದು, ಆ ಪೋಸ್ಟ್ ನೋಡಿ ಆಮಿಷಕ್ಕೆ ಒಳಗಾಗಿ ವಂಚಕನನ್ನು ಸಂಪರ್ಕಿಸಿದ್ದಾರೆ. ವಂಚಕ ಪಂದ್ಯದ ಟಿಕೆಟ್‌ಗಳು, ಊಟದ ಕೂಪನ್‌ಗಳು ಮತ್ತು ಐಪಿಎಲ್ ಸೌಲಭ್ಯಗಳನ್ನು ಹೊಂದಿರುವ ಟಿಕೆಟ್‌ಗಳನ್ನು ನೀಡುವುದಾಗಿ ಆಮಿಷ ಒಡ್ಡಿದ್ದಾನೆ. ಇದನ್ನು ನಂಬಿದ ಟೆಕ್ಕಿ, ತಾನು ಮತ್ತು ತನ್ನ ತಾಯಿಯ ಬ್ಯಾಂಕ್ ಖಾತೆಗಳಿಂದ ಹಣವನ್ನು ಪಾವತಿಸಿದ್ದಾರೆ.

ಟಿಕೆಟ್ ಕೌಂಟರ್ ಮೇಲ್ವಿಚಾರಕ ಎಂದು ನಂಬಿಸಿ ವಂಚನೆ ಮಾಡಿದ್ದು, ವಂಚಕನು ಕೂಪನ್‌ಗಳು ಮತ್ತು ಭದ್ರತಾ ಠೇವಣಿ ಹೆಸರಿನಲ್ಲಿ ಹೆಚ್ಚಿನ ಹಣವನ್ನು ವಸೂಲಿ ಮಾಡಿದ್ದಾನೆ. ಬೇರೆ ಬೇರೆ ಖಾತೆಗಳಿಗೆ ಹಂತ ಹಂತವಾಗಿ ಒಟ್ಟು 1.46 ಲಕ್ಷ ರು. ಹಣವನ್ನು ಟೆಕ್ಕಿಯಿಂದ ವರ್ಗಾಯಿಸಿಕೊಂಡಿದ್ದಾನೆ. ನಂತರ ತಾನು ವಂಚನೆಗೆ ಒಳಗಾಗಿರುವುದನ್ನು ಅರಿತು ಟೆಕ್ಕಿ, ತಕ್ಷಣವೇ ಸೈಬರ್ ಕಂಟ್ರೋಲ್‌ಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ನಂತರ ಮಹದೇವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನಮೂನೆ ಸಂ. ಐಎನ್‌ಸಿ – 26
{ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ}
ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವರ್ಗಾಯಿಸುವುದರ ಬಗ್ಗೆ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಣೆ
ಕೇಂದ್ರ ಸರಕಾರದ ಎದುರು, ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, ಬೆಂಗಳೂರು
ಉಪ ಸೆಕ್ಷನ್(4) ಸೆಕ್ಷನ್ 13ರ ಕಂಪನಿಗಳ ಕಾಯಿದೆ, 2013 ಮತ್ತು ಅನುಬಂಧ (ಎ) ಯ ಉಪ-ನಿಯಮ (5) ರ ನಿಯಮ 30 ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ರ ವಿಷಯವಾಗಿ
ಮತ್ತು
ಎಡ್ವೆಂಚರ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್
(CIN : U62099KA2023PTC175096)
ನೋಂದಾಯಿತ ಕಚೇರಿ:
ನಂ. 520, ಜಿ 01, 8ನೇ ಅಡ್ಡ ರಸ್ತೆ, 8ನೇ ಮೈನ್, ಬಿಇಎಂಎಲ್ ಲೇಔಟ್ 6ನೇ ಹಂತ, ವೈಟ್‌ಫೀಲ್ಡ್, ಬೆಂಗಳೂರು, ಬೆಂಗಳೂರು ದಕ್ಷಿಣ, ಕರ್ನಾಟಕ-560066
.....ಅರ್ಜಿದಾರ ಕಂಪನಿ/ ಅರ್ಜಿದಾರ
ಇದರ ವಿಷಯವಾಗಿ
ಸಾರ್ವಜನಿಕರಿಗೆ ಈ ಸೂಚನೆಯು ಮೂಲಕ ತಿಳಿಯಪಡಿಸುವುದೇನೆಂದರೆ, ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು "**ಕರ್ನಾಟಕ ರಾಜ್ಯ**" ದಿಂದ "**ಗುಜರಾತ್ ರಾಜ್ಯ**" ಕ್ಕೆ ಬದಲಾಯಿಸಲು ಅನುವು ಮಾಡಿಕೊಡಲು **ಮಾರ್ಚ್ 30, 2026** ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಮೆಮರಾಂಡಮ್ ಆಫ್ ಅಸೋಸಿಯೇಶನ್‌ನಂತೆ ಬದಲಾವಣೆಯ ದೃಢೀಕರಣವನ್ನು ಕೋರಿ ಕಂಪನಿ ಕಾಯ್ದೆ, 2013 ರ ಸೆಕ್ಷನ್ 13 (4) ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ
ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾವಿತ ಬದಲಾವಣೆಯಿಂದ ತೊಂದರೆಯಾಗುತ್ತಿದೆ ಎಂದಾದರೆ, **ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್** ನ್ನು, **ಎಂಸಿಎ-21 ಪೋರ್ಟಲ್ (www.mca.gov.in)** ಮೂಲಕ ಸಲ್ಲಿಸಿ, ಆತ/ಅವಳು ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ **ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, 'ಇ' ವಿಂಗ್ 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು-560034, ಕರ್ನಾಟಕ** ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು (14) ದಿನಗಳ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ.
ನಂ.520, ಜಿ 01, 8ನೇ ಅಡ್ಡ ರಸ್ತೆ, 8ನೇ ಮೈನ್, ಬಿಇಎಂಎಲ್ ಲೇಔಟ್ 6ನೇ ಹಂತ, ವೈಟ್‌ಫೀಲ್ಡ್, ಬೆಂಗಳೂರು, ಬೆಂಗಳೂರು ದಕ್ಷಿಣ, ಕರ್ನಾಟಕ-560066.
ಎಡ್ವೆಂಚರ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್
ಪರವಾಗಿ
ಸಹಿ/-
ಅರಿಂದಮ್ ಘೋಷ್
(ನಿರ್ದೇಶಕ)
DIN : 05190830
ದಿನಾಂಕ : 06.04.2026
ಸ್ಥಳ: ಬೆಂಗಳೂರು

ಸಾಹಿತ್ಯ ಓದು ಅಗತ್ಯ: ರವೀಂದ್ರ ಭಟ್ಟ

ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ 'ಬದುಕುಬನಿ ಮೂರುಧ್ವನಿ' ಪುಸ್ತಕ ಬಿಡುಗಡೆ ಮಾಡಲಾಯಿತು.

ಬೆಂಗಳೂರು: ಇಂದಿನ ಮಕ್ಕಳು ಪುಸ್ತಕಗಳಗಿಂತ ಹೆಚ್ಚು ಸಾಮಾಜಿಕ ಜಾಲತಾಣಗಳಲ್ಲಿ ಸಮಯ ಕಳೆಯುತ್ತಿದ್ದು, ಓದು ಕುಂಠಿತವಾಗಿದೆ ಎಂದು ಪ್ರಜಾವಾಣಿ ಕಾರ್ಯ ನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಹೇಳಿದರು.

ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಬೆರಗು ಪ್ರಕಾಶನ ಹಾಗೂ ತಿಳಿ ಬಳಗ ಆಯೋಜಿಸಿದ್ದ 'ಬದುಕು ಬನಿ ಮೂರುಧ್ವನಿ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲದಕ್ಕೂ ಪರ್ಯಾಯವಾಗಿ ಮೊಬೈಲ್ ಬಳಸುವಂತಾಗಿದೆ. ನಾವೊಂದು ಚೌಕಟ್ಟನ್ನು ಹಾಕಿಕೊಂಡಿದ್ದೇವೆ, ಅದನ್ನು ಮೀರಿ ಓದು ಹಾಗೂ ಸಾಹಿತ್ಯದ ಅಗತ್ಯ ಇದೆ. ಓದು ಹಾಗೂ ಸಾಹಿತ್ಯದ ಮಹತ್ವವನ್ನು ಕುರಿತು ಒತ್ತಿ ಹೇಳಿದರು.

ಇಂದಿನ ಮಕ್ಕಳು, ಹೇಗಾದರೂ ಸರಿ, ಓದುವ ಕಲೆಯನ್ನು ಹೆಚ್ಚಿಸಿಕೊಳ್ಳಬೇಕು. ಅವರು ತಮ್ಮ ಕಲ್ಪನಾಶಕ್ತಿ, ಆಸಕ್ತಿ ಬೆಳೆಸಿಕೊಳ್ಳಬೇಕಿದೆ. ತಮ್ಮ ಮಕ್ಕಳು ಕನಿಷ್ಠ ಪಕ್ಷ ಓದುವುದನ್ನು ರೂಢಿಸಿಕೊಳ್ಳಲಿ ಎಂಬುದು ಪ್ರತಿಯೊಬ್ಬ ತಂದೆ-ತಾಯಿಯ ಆಶಯವಾಗಬೇಕು ಎಂದು ಅವರು ತಿಳಿಸಿದರು.

ಬೆರಗು ಪ್ರಕಾಶನದ ರಮೇಶ್ ಕತ್ತಿ ಮಾತನಾಡಿ, ಸಾಮಾನ್ಯವಾಗಿ ತಂದೆ-ಮಗಳ, ತಂದೆ-ಮಗನ ಎರಡು ತಲೆಮಾರಿನ ಪುಸ್ತಕ ಪ್ರಕಟ ಕಂಡಿದ್ದೇವೆ. ಈ ಕಾರ್ಯಕ್ರಮದಲ್ಲಿ ಮೂರು ತಲೆಮಾರಿನ ಮಹಿ